ಓ.ಎಸ್.ನಂ.68-2019
ಪಿ.ಡಬ್ಲು-೧

ದಿ: 10-12-2024 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ವಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ ವಕೀಲರಿಂದ.

ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಪ್ರಸ್ತುತ ದಾವೆಯನ್ನು ಖಾನೇಷುಮಾರಿ ಸಂಖ್ಯೆ 75, ವಿಸ್ತೀರ್ಣ 29*17 ಅಡಿ ಆಸ್ತಿಯ ಮೇಲೆ ಮಾಡಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು ಮನೆ ಕಟ್ಟಿಕೊಳ್ಳಲು ತೊಂದರೆ ನೀಡದಂತೆ ಪರಿಹಾರ ಕೋರಿ ದಾವೆ ದಾಖಲಿಸಿರುತ್ತೇನೆ. ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಮೂಲ ವಿಸ್ತೀರ್ಣ ಉತ್ತರ ದಕ್ಷಿಣ 24 ಅಡಿ ಮತ್ತು ಪೂರ್ವ ಪಶ್ಚಿಮ 75 ಅಡಿ ಇರುತ್ತದೆ. ಸದರಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಮೂಲ ವಿಸ್ತೀರ್ಣ ಉತ್ತರ ದಕ್ಷಿಣ 48 ಅಡಿ ಮತ್ತು ಪೂರ್ವ ಪಶ್ಚಿಮ 75 ಅಡಿ ಇರುತ್ತದೆ ಎಂದರೆ ಸರಿ. ಖಾನೇಷುಮಾರಿ ಸಂಖ್ಯೆ 75 ಆಸ್ತಿ ವಿಸ್ತೀರ್ಣ ಉತ್ತರ ದಕ್ಷಿಣ 48 ಅಡಿ ಮತ್ತು ಪೂರ್ವ ಪಶ್ಚಿಮ 75 ಅಡಿ ಮೂಲ ನಂಜಪ್ಪರವರಿಗೆ ಸೇರಿದ ಆಸ್ತಿ ಆಗಿರುತ್ತದೆ. ಸದರಿ ನಂಜಪ್ಪರವರು ಪ್ರಸ್ತುತ ದಾವೆಯ ಪ್ರತಿವಾದಿಗಳ ತಂದೆ ಎಂದರೆ ಸರಿ. ಸದರಿ ಖಾನೇಷುಮಾರಿ ಸಂಖ್ಯೆ 75 ಆಸ್ತಿಯು ನಂಜಪ್ಪರವರಿಗೆ ಯಾವ ರೀತಿ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ಆ ರೀತಿ ಖಾನೇಷುಮಾರಿ ಸಂಖ್ಯೆ 75 ನಿವೇಶನವನ್ನು ನಂಜಪ್ಪರವರು ನಂಜುಂಡಪ್ಪರವರಿಂದ ಖರೀದಿಸಿರುತ್ತಾರೆ. ಆ ರೀತಿ 1945 ನೇ ಸಾಲಿನಲ್ಲಿ ನಂಜಪ್ಪ ರವರು ಖಾನೇಷುಮಾರಿ ಸಂಖ್ಯೆ 75 ಆಸ್ತಿಯನ್ನು ಖರೀದಿಸಿರುತ್ತಾರೆ. ಆ ರೀತಿ ನಂಜಪ್ಪರವರು ಉತ್ತರ ದಕ್ಷಿಣ 48 ಅಡಿ ಮತ್ತು ಪೂರ್ವ ಪಶ್ಚಿಮ 75 ಅಡಿ ಜಾಗವನ್ನು ಖರೀದಿಸಿರುತ್ತಾರೆ. ಸದರಿ ನಂಜಪ್ಪರವರು ಖರೀದಿಸಿದ ಮೂಲ ನಿವೇಶನದ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ರಸ್ತೆ ಮತ್ತು ಓಣಿ , ಪಶ್ಚಿಮಕ್ಕೆ ಚಿಕ್ಕಬೈರಪ್ಪ ಮತ್ತು ನಂಜಪ್ಪರವರ ವಠಾರ, ಉತ್ತರಕ್ಕೆ ಚೆನ್ನಬಸ್ಸಪ್ಪರವರ ಖಾಲಿ ನಿವೇಶನ , ದಕ್ಷಿಣಕ್ಕೆ ಗೌರಮ್ಮ ರವರ ವಠಾರ ಇರುತ್ತದೆ. ಆ ರೀತಿ ನಂಜಪ್ಪರವರು ಖರೀದಿಸಿದ ಮೂಲ ನಿವೇಶನದ ದಕ್ಷಿಣಕ್ಕೆ ಗೌರಮ್ಮರವರ ವಠಾರ ಇರುವುದಿಲ್ಲ ಬೀರಳಪ್ಪರವರ ವಠಾರ ಇರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಂಜಪ್ಪರವರು ಖರೀದಿಸಿದ ಮೂಲ ನಿವೇಶನದ ಪೂರ್ವಕ್ಕೆ ಸರ್ಕಾರಿ ಓಣಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪಶ್ಚಿಮಕ್ಕೆ ಇದೆ ಎಂದು ಹೇಳುವ ನಂಜಪ್ಪರವರು ಪ್ರತಿವಾದಿಯ ತಂದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.